Karnataka Civil Judge (Mains) 2016

Translation Paper · compulsory paper

Date: 09.07.2016 · Time: 10.00 AM to 1.00 PM · Maximum Marks: 100

Part I

I. Translate the following deposition into Kannada language: 15 Marks

I know the plaintiff and the defendants. They are the sons of my sister. I am their maternal uncle. Sampangiram is the father of one Krishnamurthy who is the father of plaintiffs and defendants. Sampangiram migrated to Karnataka in the year 1980 from Tamilnadu, he was carrying on oil business at Tumakuru. He was aged 60 years when he came to Karnataka, his son Krishnamurthy was aged 30 years at that time. Krishnamurthy and Sampangiram were residing together at Tumakuru. The said Sampangiram died during the year 1998, his wife Rathnamma predeceased him. My sister Vedavathy is the wife of said Krishnamurthy. He died during the year 2002 and Vedavathy also died during the same year. Except the plaintiffs and defendants who are all sons, there are no other issues to the said Krishnamurthy. The house No.42 at Gubbi and mango garden at Turuvekere were earned by the said Sampangiram. Out of the income earned from mango garden my brother-in-law Krishnamurthy purchased RCC roofed house and vacant site at Sira gate, Tumakuru, during year 2004. I had stayed in the house of Krishnamurthy for more than 2 years from the year 2000. 10 acres of wet land with two bore wells and a farm house at Gulur, Tumakuru taluk, were purchased by Krishnamurthy for joint family in the name of his elder son, the defendant No.1, during the year 2000. Plaintiffs and defendants are the members of the joint family. The building which is let out to the State Bank of Mysoru at Kunigal was purchased by the second defendant. Similarly building which is let out to a departmental store behind police station Tumakuru was purchased by second defendant out of the joint family funds. Arecanet garden of 12 acres at Gulur, Tumakuru Taluk was purchased by the first plaintiff out of the earnings of the joint family. The house at Anthasaranahalli Tumakuru belongs to the joint family of the plaintiffs and the defendants. It was purchased by late Sampangiram in the year 1996. The plaintiffs and the defendants are residing separately in different portions of the same building which was purchased by Krishnamurthy in the year 2004.

II. Translate the following document into Kannada language: 15 Marks

DEED OF MORTGAGE

This deed of mortgage is made this the 15th day of March 2016 at Kollegal between:

Sri Gururaj,
Aged 40 years,
S/o Sri Ramanna,
No.51, Garden Street,
Kollegal.

Hereinafter called the mortgagor, AND

Sri Manjunatha Gowda,
Aged about 57 years,
Residing at Jain Temple Street,
Kollegal.

Hereinafter called the mortgagee

The terms mortgagor and mortgagee, wherever the context in this document admits, shall mean and include their respective legal heirs, administrators and persons claiming under them.

This deed witnesseth as under :

1. The mortgagor is the sole and absolute owner in possession of the schedule property under this deed, having purchased the same under the registered sale deed dated 04/04/2000 for valuable consideration from Sri Rajarao, s/o Vadiraj registered as No. 42, volume 1516 of Book I in the office of the Sub-registrar, Kollegal.

2. The mortgagor has fallen into financial crisis and requires funds for the marriage of his daughter and surgery to his wife, hence he has decided to mortgage the schedule property and offered the same to the mortgagee who has accepted the offer and came forward to lend money on the security of the schedule property.

3. Now that the mortgagor under this deed has mortgaged the schedule property for Rs.10 lakh and has received the said amount in cash by way of on-line transfer to the savings bank account of the mortgagor bearing No.4242 at Syndicate Bank, Kollegal and the mortgagor acknowledges the receipt of the same from the mortgagee.

4. Thus, having received the mortgage money of Rs.10 lakh from the mortgagee, the mortgagor by way security for repayment of the said amount of Rs.10 lakh, has mortgaged the schedule property which consists of mango and lichi fruits garden spread over 8 acres of land with a farm house and bore well at Gajanur road, Kollegal.

5. The mortgagor having delivered the possession of the schedule property to the mortgagee, has assured the latter of quiet possession and enjoyment without his interference for a period of 3 years from today during which period the mortgagee shall be entitled for the usufructs from the schedule property and reap the fruits of the schedule property, bore well and also shall enjoy the possession of the farm house in the same.

6. It is made clear that the mortgagor shall repay the mortgage money to the mortgagee after 3 years but before the expiry of the fourth year and upon the receipt of the mortgage money from the mortgagor, the mortgagee shall execute Deed of Redemption of mortgage in favour of the mortgagor and also shall deliver back the possession of the schedule property to the mortgagor.

7. It is made clear that the notional value of the monthly income from the usufructs of the schedule property is calculated both by mortgagor and mortgagee at Rs.20,000 and it is agreed between the mortgagor and mortgagee that there shall be reduction of Rs.10,000 from the mortgage money of Rs.10 lakh, every month and balance of Rs.10,000 shall be treated as interest. Thus, it is calculated for 3 years forming 36 months from today, there shall be a reduction of Rs.3,60,000/- calculated at the rate Rs.10,000/- per month.

8. Thus, at the time of redemption of the mortgage, the mortgagor shall pay the balance amount of Rs.6,40,000/- to the mortgagee and upon the receipt of which, the mortgagee shall execute necessary Deed of Redemption in favour the mortgagor, at the costs and expenditure of mortgagor.

9. That the mortgagee in possession of the schedule property shall not damage or waste the fruit bearing trees and the farm house in the schedule property, at the same time the mortgagor, shall not

interfere with the peacefull possession and enjoyment of the mortgagor over the schedule property during the mortgage period.

10. It is agreed between the parties that in case of default by either of them to comply with the terms of this deed, the aggrieved party shall be at liberty to take suitable legal action against the party at default in which event, the latter shall be liable for the costs and expenditure in the process.

SCHEDULE

Eight acres of garden land with borewell and farm house of 10 squares and also consisting of fruits bearing 200 mango and 120 lichi trees in Sy.No.101 at Gajanur road, Kollegal being bounded on the

East by	Road
West by	Government land
North by	Government canal, and on the
South by	Land of Janardhan

In witness whereof, the parties hereunto have set their hands and subscribed signatures, the day, month and the year first above mentioned.

Sd/- Sri Gururaj Mortgagor	Sd/- Sri Manjunatha Gowda Mortgagee

Witnessess:
1. Sri Sreedhar Murthy, S/o. Srinivas Murthy, House No. 42, 5th Cross, Kollegal Main Road, Yelandur.
2. Sri Keshavanand, S/o Paranjothi, Gajanur road, Kollegal.
Written by: Seetharam Pandit, License No.42, Kollegal.

III. Translate the following passage from a Judgment into Kannada language: 20 Marks

"Even without invoking the doctrines of promissory estoppel and legitimate expectation, it can safely be concluded, in the facts of the present case as discussed herein above, that the State Government did not act either fairly, reasonably or in accordance with law and ultimately favored Respondent no.2 by eliminating the petitioner from the fray, defeating the purport and intent of the order dated 25.07.2012 of this Court. That, however, does not mean that the petitioner was, as a matter of right, entitled to the grant of lease of the land in question, but he was certainly entitled to consideration on merits of his application therefor. Accordingly, even as the Government failed to either record reasons for treating the petitioner's case as a special case or refund the fees within a reasonable time or dispose the application of the petitioner within prescribed period, the public interest and fairness in dealing with applications for grant of lease required that, while deciding the applications for grant of lease, the competent authority ought to have recorded the reasons for keeping and showing the petitioner's application as pending and not refunding the fees; and considered both the applications for grant of lease in respect of the same land on merits and in accordance with law without discrimination.

Part II

IV. Translate the following deposition into English language: 15 Marks

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಭಿನ್ನಮಂಗಲ,

ಅಸಲು ದಾವೆ ಸಂಖ್ಯೆ [...]/೨೦೧೨

ವಾದಿ	:	ಶ್ರೀಮತಿ ಮಂಜುಳಮ್ಮ
		ವಿರುದ್ಧ
ಪ್ರತಿವಾದಿ	:	ಶ್ರೀ ಕರಿಯಪ್ಪ.

ಪ್ರಮಾಣ ರೂಪದಲ್ಲಿ ಸಾಕ್ಷ್ಯ — ಪ್ರಾಸ ೨ — ದಿನಾಂಕ: ೨.೨.೨೦೧೪

ಪ್ರಮಾಣ ಮಾಡಲಾಗಿದೆ

ಹೆಸರು	:	ಶ್ರೀ ನಾಗೇಂದ್ರರಾವ್,
ವಯಸ್ಸು	:	೨೮ ವರ್ಷಗಳು
ಉದ್ಯೋಗ	:	ಸರ್ಕಾರಿ ನೌಕರ
ವಾಸ	:	ಭಿನ್ನಮಂಗಲ.

ಪಾಟಿ ಸವಾಲು: ಶ್ರೀ ರಘುರಾಮ್, ವಾದಿಯ ಪರ ವಕೀಲರು.

೧. ನನಗೆ ವಾದಿ ಮತ್ತು ಪ್ರತಿವಾದಿಗಳು ಗೊತ್ತು. ಕಾರಹಳ್ಳಿ ಗ್ರಾಮದ ಸರ್ವೆ ನಂ.[...]ರಲ್ಲಿ ನನ್ನ ಎರಡು ಎಕರೆ ಜಮೀನು ಇರುತ್ತದೆ. ನನ್ನ ಜಮೀನಿನ ಎಡಭಾಗದಲ್ಲಿ ವಾದಿಯ ಜಮೀನು ಮತ್ತು ಬಲಭಾಗದಲ್ಲಿ ಪ್ರತಿವಾದಿಯ ಜಮೀನು ಇರುತ್ತವೆ ಅಲ್ಲದೇ ವಾದಿಯ ಜಮೀನಿನ ಹಿಂದುಗಡೆ ಸಹ ಪ್ರತಿವಾದಿಯ ಜಮೀನು ಇರುತ್ತದೆ.

೨. ಪ್ರತಿವಾದಿಯ ಯಾವುದೇ ಜಮೀನು ಕಾರಹಳ್ಳಿ ಗ್ರಾಮದಲ್ಲಿ ಇಲ್ಲ ಎನ್ನುವ ಸೂಚನೆ ಸರಿಯಲ್ಲ.

೩. ಕೊಳವೆ ಬಾವಿಗಳು ನನ್ನ, ವಾದಿಯ ಮತ್ತು ಪ್ರತಿವಾದಿಯ ಜಮೀನುಗಳಲ್ಲಿ ತಲಾ ಒಂದರಂತೆ ಇರುತ್ತವೆ. ಪ್ರತಿವಾದಿಯು ವಾದಿಯ ಜಮೀನಿನ ಹಿಂದುಗಡೆಯಲ್ಲಿ ಇರುವ ವಿವಾದ ಗ್ರಸ್ಥ ಜಮೀನಿನಲ್ಲಿ ಒಂದು ತಿಂಗಳ ಹಿಂದೆ ಹೊಸ ಕೊಳವೆ ಬಾವಿಯನ್ನು ಕೊರಿಸಿದನು. ಅದರ ಆಳ ಪ್ರತಿವಾದಿಯು ಹೇಳಿದಂತೆ ೧೨೦೦ ಅಡಿಗಳು ಆಗಿರುತ್ತೆ. ಪ್ರತಿವಾದಿಯ ವಿವಾದ ಗ್ರಸ್ಥ ಜಮೀನಿನ ಮುಂದುಗಡೆ ವಾದಿಯ ಜಮೀನಿನಲ್ಲಿ ಇರುವ ಆತನ ಕೊಳವೆ ಬಾವಿಯ ಆಳ ೮೦೦ ಅಡಿ ಆಗಿರುತ್ತದೆ.

೪. ಪ್ರತಿವಾದಿಯು ಹೊಸ ಕೊಳವೆ ಬಾವಿಯನ್ನು ಕೊರೆಸುವ ಆರು ತಿಂಗಳ ಹಿಂದೆ ವಾದಿಯು ತನ್ನ ಜಮೀನಿನಲ್ಲಿ ಕೊಳವೆ ಬಾವಿಯನ್ನು ಕೊರೆಸಿದ್ದ. ವಾದಿಯ ಜಮೀನಿನಲ್ಲಿ ಇರುವ ಸದರಿ ಕೊಳವೆ ಬಾವಿಯನ್ನು ಕೊರೆಸಿದ ಒಂದು ತಿಂಗಳ ಒಳಗಾಗಿ ನೀರು ಬತ್ತಿಹೋಯಿತು ಮತ್ತು ಆತನು ತನ್ನ ಸದರಿ ಭೂಮಿಯಲ್ಲಿ ಐದು ತಿಂಗಳುಗಳಿಂದ ವ್ಯವಸಾಯ ಮಾಡುತ್ತಿಲ್ಲ.

೫. ಪ್ರತಿವಾದಿಯು ತನ್ನ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸುವ ಮುಂಚೆ, ವಾದಿಯ ಜಮೀನಿನಲ್ಲಿ ಜಲವು ಸಮೃದ್ಧವಾಗಿ ಇತ್ತು ಮತ್ತು ಪ್ರತಿವಾದಿ ಕೊಳವೆ ಬಾವಿಯನ್ನು ಕೊರೆಸಿದ ನಂತರ ವಾದಿಯ ಜಮೀನಿನಲ್ಲಿರುವ ಜಲ ಮೂಲವು ಬತ್ತಿಹೋಯಿತು ಅನ್ನುವ ಸೂಚನೆ ಸರಿಯಲ್ಲ.

೬. ಪ್ರತಿವಾದಿಯು ಹೊಸ ಕೊಳವೆ ಬಾವಿಯನ್ನು ಕೊರೆಸುವ ಐದು ತಿಂಗಳ ಹಿಂದೆಯೇ ವಾದಿಯ ಜಮೀನಿನಲ್ಲಿದ್ದ ಕೊಳವೆ ಬಾವಿಯ ನೀರು ಬತ್ತಿಹೋಗಿತ್ತು ಆದ್ದರಿಂದ ವಾದಿಯು ತನ್ನ ಜಮೀನಿನ ಕೊಳವೆ ಬಾವಿಯಲ್ಲಿ ನೀರು ಬತ್ತಿಹೋದಲಾಗಾಯಿತು ಕಳೆದ ಐದು ತಿಂಗಳಿಂದ ವ್ಯವಸಾಯ ಮಾಡುತ್ತಿಲ್ಲ.

೭. ಪ್ರತಿವಾದಿಯು ಹೊಸದಾಗಿ ಕೊರೆಸಿರುವ ಕೊಳವೆ ಬಾವಿಯು ವಾದಿ ಮತ್ತು ಪ್ರತಿವಾದಿಯ ನಡುವೆ ವಿವಾದ ಗ್ರಸ್ಥ ಭೂಮಿಯಲ್ಲಿ ಇರುತ್ತದೆ ಎನ್ನುವ ಸೂಚನೆ ನಿಜ.

೮. ಪ್ರತಿವಾದಿಗೆ ಸದರಿ ಜಮೀನು ಸರ್ಕಾರದಿಂದ ಮಂಜೂರುಯಾಗಿತ್ತು ಎಂಬ ಸೂಚನೆ ನಿಜ, ಅದು ನನ್ನ ಜಮೀನಿನ ಪಕ್ಕದಲ್ಲಿರುವ ಜಮೀನು. ಪ್ರತಿವಾದಿಯು, ವಾದಿಯ ಜಮೀನಿನ ಹಿಂದೆ ಒಂದು ಗುಂಟೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುತ್ತಾನೆ ಎನ್ನುವ ಸೂಚನೆ ಸರಿಯಲ್ಲ. ಮತ್ತು ಸದರಿ ಒಂದು ಗುಂಟೆ ಜಾಗದಲ್ಲಿ ಕೊಳವೆ ಬಾವಿಯನ್ನು ಕೊರೆಸಿದ್ದಾನೆ ಎನ್ನುವ ಸೂಚನೆ ಸರಿಯಲ್ಲ.

೯. ಸದರಿ ವಿವಾದ ಗ್ರಸ್ಥ ಜಮೀನಿಗಾಗಿ ವಾದಿ ಹಾಗೂ ಪ್ರತಿವಾದಿ ನಡುವೆ ಜಗಳವಾಯಿತು ಮತ್ತು ಈ ಸಂಬಂಧ ಒಂದು ಕ್ರಿಮಿನಲ್ ಮೊಕದ್ದೊಮೆಯು ದಾಖಲಾಗಿದೆ ಎಂಬ ಸೂಚನೆ ನಿಜ. ಆದರೆ ಸದರಿ ಮೊಕದ್ದೊಮೆಯಲ್ಲಿ ಯಾರು ಫಿರ್ಯಾದಿ ಮತ್ತು ಯಾರು ಆಪಾದಿತ ಎಂಬುದು ನನಗೆ ಗೊತ್ತಿಲ್ಲ.

೧೦. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂಬುದು ಸರಿಯಲ್ಲ. ನಾನು ಪ್ರತಿವಾದಿಗೆ ನಿಕಟ ಸಂಬಂಧಿ ಅನ್ನುವ ಸೂಚನೆ ಸರಿ ಮತ್ತು ಸದರಿ ಸಂಬಂಧದಿಂದ ನಾನು ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅನ್ನುವ ಸೂಚನೆ ಸರಿಯಲ್ಲ.

ಸಹಿ — ಪ್ರಾಸ ೧

V. Translate the following document into English language: 15 Marks

ಶುದ್ಧ ಕ್ರಯ ಪತ್ರ

ಸನ್ ಸಾವಿರದ ಒಂಬೈನೂರ ತೊಂಬತ್ತಾರನೆಯ ಇಸವಿ ಜನವರಿ ಮಾಹೆ ತಾರೀಖು ೧೩ರಲ್ಲಿ ಹೊಸಕೋಟೆ ತಾಲೂಕಿನ ತಾವರೆಕೆರೆ ಗ್ರಾಮದಲ್ಲಿ ವಾಸವಾಗಿರುವ ಹನುಮಂತಪ್ಪನವರ ಮಗ ಸುಮಾರು ೪೫ ವರ್ಷ ವಯಸ್ಸುಳ್ಳ ಮುನಿಕೃಷ್ಣಪ್ಪ ಆದ ನಾನು ಇದೇ ಹೊಸಕೋಟೆ ತಾಲೂಕಿನ ತಾವರೆಕೆರೆ ಗ್ರಾಮದಲ್ಲಿ ವಾಸವಾಗಿರುವ ೪೫ ವರ್ಷ ವಯಸ್ಸುಳ್ಳ ಗೋವಿಂದರೆಡ್ಡಿಯವರ ಮಗ ಕೃಷ್ಣಾರೆಡ್ಡಿ ರವರಿಗೆ ಒಪ್ಪಿ ಬರೆಸಿಕೊಟ್ಟ ಶೆಡ್ಯೂಲ್ ಸ್ವತ್ತಿನ ಶುದ್ಧ ಕ್ರಯ ಪತ್ರ

೧. ಶೆಡ್ಯೂಲ್ ಸ್ವತ್ತು ಸದರಿ ತಾವರೆಕೆರೆ ಗ್ರಾಮದ ಸರ್ವೆ ನಂಬರ್ [...]ರಲ್ಲಿ ೪ ಎಕರೆ ಖುಷ್ಕಿ ಜಮೀನಾಗಿದ್ದು, ಸದರಿ ಜಮೀನನ್ನು ನಾನು ೧೯೯೦ನೇ ಸಾಲಿನಲ್ಲಿ ಇದೇ ಹೊಸಕೋಟೆ ತಾಲೂಕಿನ ತಾವರೆಕೆರೆ ಗ್ರಾಮದ ಮುನಿಚಿನ್ನಪ್ಪ ಎಂಬುವರಿಂದ ನೊಂದಣಿ ಸಂಖ್ಯೆ ೨೩, ಸಂಪುಟ [...], ಪುಸ್ತಕ ೧ರಂತೆ ಶುದ್ಧ ಕ್ರಯಪತ್ರದ ಮೂಲಕ ಪಡೆದಿದ್ದು, ಅಂದಿನಿಂದ ಶೆಡ್ಯೂಲ್ ಜಮೀನು ನನ್ನ ಸ್ವಾಧೀನ ಹಾಗೂ ಒಡೆತನದಲ್ಲಿರುತ್ತದೆ.

೨. ಸಂಸಾರದ ಅವಶ್ಯಕತೆಗಳು ಹಾಗೂ ನನ್ನ ಹಿರಿಯ ಮಗಳ ಮದುವೆ ಮತ್ತು ಕಿರಿಯ ಮಗನ ಶಿಕ್ಷಣಕ್ಕೆ ಹಣದ ಅವಶ್ಯಕತೆ ಇರುತ್ತದೆ. ಆದ್ದರಿಂದ ಮುನಿಕೃಷ್ಣಪ್ಪ ಆದ ನಾನು ಶೆಡ್ಯೂಲ್ ಸ್ವತ್ತನ್ನು ಇದರ ಇಂದಿನ ಮಾರುಕಟ್ಟೆ ಧಾರಣೆ ೫ ಲಕ್ಷ ರೂಪಾಯಿಗಳಿಗೆ ಕ್ರಯ ಮಾಡಲು ಇರುವುದಾಗಿ ಮತ್ತು ತಮ್ಮ ಅಭಿಪ್ರಾಯವನ್ನು ಕೇಳಿದಾಗ ಕೃಷ್ಣಾರೆಡ್ಡಿಯವರಾದ ನೀವು ಶೆಡ್ಯೂಲ್ ಸ್ವತ್ತನ್ನು ೫ ಲಕ್ಷ ರೂಪಾಯಿಗಳಿಗೆ ಕೊಳ್ಳಲು ಒಪ್ಪಿದ್ದರಿಂದ ಶೆಡ್ಯೂಲ್ ಸ್ವತ್ತನ್ನು ನಾನು ನಿಮಗೆ ಕ್ರಯ ಮಾಡುವ ಪ್ರಸಂಗ ಬಂದೊದಗಿದೆ.

೩. ಈದಿನ ಸದರಿ ೫ ಲಕ್ಷ ರೂಪಾಯಿಗಳಿಗೆ ಶೆಡ್ಯೂಲ್ ಸ್ವತ್ತನ್ನು ನಾನು ನಿಮಗೆ ಕ್ರಯ ಮಾಡಿ ಅದರ ಸ್ವಾಧೀನವನ್ನು ನಿಮ್ಮ ಸುಭರ್ದಿಗೆ ಬಿಟ್ಟಿರುತ್ತೇನೆ ಮತ್ತು ಸದರಿ ಮೊತ್ತವಾದ ೫ ಲಕ್ಷ ರೂಪಾಯಿಗಳಿಗೆ ನರಸಾಪುರದ ಸಿಂಡಿಕೇಟ್ ಬ್ಯಾಂಕ್ ಶಾಖೆಯಿಂದ ದಿನಾಂಕ ೧೩.೦೧.೧೯೯೬ರಂದು ನೀವು ನನಗಾಗಿ ಕೊಂಡಿರುವ ಸಂಖ್ಯೆ [...]ವುಳ್ಳ ಡಿಮ್ಯಾಂಡ್ ಡ್ರಾಫ್ಟನ್ನು ನಿಮ್ಮಿಂದ ಈ ಕೆಳಕಂಡ ಸಾಕ್ಷಿಗಳ ಮುಂದೆ ಪಡೆದಿರುತ್ತೇನೆ.

೪. ಶೆಡ್ಯೂಲ್ ಸ್ವತ್ತಿಗೆ ನನ್ನ ವಿನಹ: ಅನ್ಯರು ಯಾವ ತರಹದ ಹಕ್ಕನ್ನು ಹೊಂದಿರುವುದಿಲ್ಲ. ಇದು ನನ್ನ ಸ್ವಯಾರ್ಜಿತ ಮತ್ತು ಋಣ ಭಾರ ರಹಿತವಾಗಿರುತ್ತೆ. ಈ ದಿನ ಶೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ನಿಮಗೆ ನೀಡಿರುತ್ತೇನೆ.

೫. ಈ ಕ್ರಯಪತ್ರದ ಮುಖೇನ ತಾವು ಶೆಡ್ಯೂಲ್ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿ ಇದರ ಸ್ವಾಧೀನವನ್ನು ಸುಖದಿಂದ ಅನುಭವಿಸತಕ್ಕದ್ದು ಮತ್ತು ಶೆಡ್ಯೂಲ್ ಸ್ವತ್ತಿನ ಖಾತೆ, ಪಹಣಿ, ವಗೈರೆಗಳನ್ನು ನಿಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳತಕ್ಕದ್ದು. ಸದರಿ ಚಟುವಟಿಕೆಗಳಿಗೆ, ನನ್ನಿಂದ ಬೇಕಾದ ಎಲ್ಲ ಸಹಕಾರವನ್ನು ನಿಮಗೆ ನೀಡುತ್ತೇನೆಂದು ಈ ಕ್ರಯಪತ್ರದ ಮೂಲಕ ನಿಮಗೆ ವಾಗ್ದಾನ ಮಾಡಿರುತ್ತೇನೆ.

೬. ಈ ಕ್ರಯಪತ್ರಕ್ಕೆ ಅಥವಾ ಶೆಡ್ಯೂಲ್ ಸ್ವತ್ತಿಗೆ ಯಾರಿಂದ ಯಾವುದೇ ತಂಟೆ ತಕರಾರು ಬಂದಲ್ಲಿ ಅದನ್ನು ನಾನು ನನ್ನ ಸಂಪೂರ್ಣ ಜವಾಬ್ದಾರಿ ಮತ್ತು ಖರ್ಚಿನಿಂದ ಬಗೆಹರಿಸಿಕೊಡುತ್ತೇನೆಂದು ನನ್ನ ಖುದ್ದು ಮನೋರಾಜಿಯಿಂದ ಒಪ್ಪಿ ಬರೆಸಿಕೊಟ್ಟ ಶುದ್ಧ ಕ್ರಯ ಪತ್ರದ ಸಹಿ.

ಶೆಡ್ಯೂಲ್ ಸ್ವತ್ತು

ಹೊಸಕೋಟೆ ತಾಲೂಕಿನ ತಾವರೆಕೆರೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ [...]ರಲ್ಲಿ ೪ ಎಕರೆ ಖುಷ್ಕಿ ಜಮೀನು ಇದಕ್ಕೆ ಆಕಾರ ೫೦ ರೂಪಾಯಿ ಮತ್ತು ಇದಕ್ಕೆ ಚೆಕ್ಕು ಬಂದಿ:

ಪೂರ್ವಕ್ಕೆ	: ರಸ್ತೆ,
ಪಶ್ಚಿಮಕ್ಕೆ	: ಸರ್ವೆ ನಂ. [...]ರ ಬಾಬ್ತು ಜಮೀನು,
ಉತ್ತರಕ್ಕೆ	: ಗೋಮಾಳ, ಮತ್ತು
ದಕ್ಷಿಣಕ್ಕೆ	: ರಾಮೇಗೌಡರ ಮಾವಿನ ತೋಟ.

ಸಹಿ/- ಕ್ರಯದಾರ

ಸಾಕ್ಷಿಗಳು

ಸಹಿ/-
೧. ಶ್ರೀನಿವಾಸರೆಡ್ಡಿ ಬಿನ್ ರಾಮಾರೆಡ್ಡಿ,
ಕೃಷ್ಣರಾಜಪುರ,

ಸಹಿ/-
೨. ಶ್ರೀ ಭೀಮಣ್ಣ ಬಿನ್ ಮ್ಯಾಕಲಪ್ಪ,
ಹಸುವಿನಹಳ್ಳಿ, ಹೊಸಕೋಟೆ ತಾಲ್ಲೂಕು.

ಬಿಕ್ಕಲಂದಾರರು
ಸಹಿ/-
ನಾಗೇಂದ್ರರಾವ್
ಪರವಾನಗಿ ಸಂಖ್ಯೆ: ೧೫
ಹೊಸಕೋಟೆ.

VI. Translate the following passage from a Judgment into English language: 20 Marks

"೮-ಎ ನಿಯಮದ ಸರಳ ಶಾಸನಾತ್ಮಕ ಉಪಬಂಧಗಳ ಉಲ್ಲೇಖದೊಂದಿಗೆ ಯುಕ್ತ ವಾಸ್ತವಾಂಶಗಳ ಮೇಲಿನ ವಿಶ್ಲೇಷಣೆಯು, ರಾಜ್ಯ ಸರ್ಕಾರದ ಸಂಬಂಧಪಟ್ಟ ಪ್ರತ್ಯರ್ಜಿದಾರ ಪ್ರಾಧಿಕಾರಗಳು ಅರ್ಜಿದಾರ ಅಂತೆಯೇ ಪ್ರತ್ಯರ್ಜಿದಾರ ೨ ಇವರುಗಳೊಂದಿಗಿನ ವ್ಯವಹರಣೆಯಲ್ಲಿ ತಮ್ಮ ಸ್ವಂತ ಕ್ರಮಗಳನ್ನು ಹೊಂದಿರುತ್ತಾರೆಂಬ ತೀರ್ಮಾನಕ್ಕೆ ಬರುವಂತೆ ಮಾಡುತ್ತದೆ ಮತ್ತು ಅಂತಿಮವಾಗಿ, ಪ್ರತ್ಯಪೀಲುದಾರ ೨ ಇವನು, ನ್ಯಾಯಾಲಯವು ಅವಕಾಶ ಕಲ್ಪಿಸಿಕೊಟ್ಟಿರದಂಥ ರೀತಿಯಲ್ಲಿ ಈ ನ್ಯಾಯಾಲಯದ ಆದೇಶವನ್ನು ವ್ಯಾಖ್ಯಾನಿಸಿಕೊಂಡು ತಾನು ಗುತ್ತಿಗೆಯನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಪಡೆಯುವಲ್ಲಿ ಯಶಸ್ವಿಯಾಗಿರುತ್ತಾನೆ. ಅಧಿಸೂಚಿತವಾಗಿದ್ದಂಥ ಭೂಮಿಯ ಸಂಬಂಧದಲ್ಲಿ ಗುತ್ತಿಗೆಯನ್ನು ಪಡೆಯಲು ಕಾನೂನುಬದ್ಧವಾಗಿ ಕ್ಲೇಮು ಮಾಡಿದ್ದರೂ ಕೂಡ ಅವಕಾಶವನ್ನು ನಿರ್ದಾಕ್ಷಿಣ್ಯವಾಗಿ ಮತ್ತು ನಿಕೃಷ್ಟವಾಗಿ ನಿರಾಕರಿಸುವ ಮೂಲಕ ಬಾಧಿತನಾಗಿದ್ದ ಅರ್ಜಿದಾರನನ್ನು ಸಮರ್ಥಗೊಳಿಸಿರುತ್ತದೆ. ಇಲ್ಲಿ, ಒಂದೇ ಸರ್ವೆ ಸಂಖ್ಯೆಯ ಗುತ್ತಿಗೆಗಾಗಿ ಎರಡು ಅರ್ಜಿಗಳನ್ನು ೨೫.೦೭.೨೦೧೨ರಂದೇ ಸ್ವೀಕರಿಸಲಾಗಿದ್ದು, ಆದರೆ ವಾಸ್ತವವಾಗಿ ಹಿಂದಿನ ಕಲ್ಲುಗಣಿಗಾರಿಕೆ ಲೈಸನ್ಸ್‌ಸಂ.[...] ಗುರುತಿಸಿರುವ ಪ್ರಶ್ನಿತ ಜಮೀನಿನ ಸಂಬಂಧದಲ್ಲಿ ಅರ್ಜಿದಾರರ ಅರ್ಜಿಯನ್ನು ಮಾತ್ರವೇ ಇತ್ಯರ್ಥಪಡಿಸಬೇಕಿತ್ತು ಮತ್ತು ಆಗ ಅರ್ಜಿಯನ್ನು ಇತ್ಯರ್ಥಪಡಿಸಿದ್ದರೆ ಅದು ಅವಧಿಪೂರ್ವವಾಗುತ್ತಿತ್ತು. ಇದರಿಂದ ಪ್ರತ್ಯಪೀಲುದಾರ ಸಂ.೨ ಇವರ ಅರ್ಜಿಯು ಇತ್ಯರ್ಥವಾಗದೆ ಹಾಗೆ ಉಳಿದುಬಿಡುತ್ತಿತ್ತೆಂದು ಸರ್ಕಾರವು ಈ ನ್ಯಾಯಾಲಯದ ಮುಂದೆ ಹೇಳಿರುವುದನ್ನು ಗಮನಿಸಬೇಕಾದ ಅವಶ್ಯಕತೆಯಿರುತ್ತದೆ. ಹಾಗಾಗಿ, ರಾಜ್ಯ ಸರ್ಕಾರ ಮಾಡಬೇಕಾದ ಕೆಲಸಗಳನ್ನು ಮಾಡದಿರುವುದು ಮತ್ತು ಮಾಡಬಾರದ ಕೆಲಸವನ್ನು ಪ್ರಜ್ಞಾಪೂರ್ವಕವಾಗಿ ಮಾಡುವ ಮೂಲಕ ವಿಳಂಬಿತ ಹಂತದಲ್ಲಿ ಅರ್ಜಿದಾರನನ್ನು ಬಿಟ್ಟುಬಿಡಲಾಗಿತ್ತು."